# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 673 |
| ಉತ್ತರಿಸಬೇಕಾದ ದಿನಾಂಕ | 21-02-2023 |
| ಉತ್ತರಿಸಬೇಕಾದವರು | ನಗರಾಭಿವೃದ್ಧಿ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ನಗರದ ಚಿದ್ರಿ ಸರ್ವೆ ನಂ:125 ರಲ್ಲಿ (ಸಿದ್ರಾಮಯ್ಯಾ ಬಡಾವಣೆ), ನೌಬಾದ ಸರ್ವೆ ನಂ.8 (ವ್ಯಾಲಿವ್ಯೂ) ರಲ್ಲಿ ಸುಮಾರು 13 ನಿವೇಶನಗಳನ್ನು ಮಾರಾಟ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ | ಬಂದಿದೆ. |
| ಆ) | ಬಂದಿದ್ದಲ್ಲಿ, ಇದನ್ನು ಕಾನೂನು ಪ್ರಕಾರ ಸ್ಥಳೀಯ ಹಾಗೂ ರಾಜ್ಯ ಪತ್ರಿಕೆಗಳಲ್ಲಿ ಜಾಹೀರಾತು ನೀಡಿ ಅರ್ಜಿಗಳನ್ನು ಕರೆದು ಪಾರದರ್ಶಕವಾಗಿ ಮಾರಾಟ ಮಾಡಲಾಗಿದೆಯೇ; (ಜಾಹೀರಾತು ನೀಡಿದಲ್ಲಿ ಪತ್ರಿಕೆಗಳ ತುಣುಕು / ಪ್ರತಿ ಒದಗಿಸುವುದು) | ಸದರಿ ನಿವೇಶನಗಳ ಇ-ಹರಾಜು ಅಧಿಸೂಚನೆಯನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ಮೂ.ನಿ ಹಾಗೂ ವಾ.ನಿ) ನಿಯಮಗಳು 1991 ರಂತೆ ನಗರ ಪ್ರದೇಶದಲ್ಲಿ ವ್ಯಾಪಕ ಪ್ರಸಾರವನ್ನು ಹೊಂದಿರುವ ಕನಿಷ್ಠ ಎರಡು ಪತ್ರಿಕೆಗಳಲ್ಲಿ ಪ್ರಕಟಿಸಲು ತಿಳಿಸಿರುವಂತೆ ಪ್ರಾಧಿಕಾರದಿಂದ ಬೀದರ ನಗರದ ಎರಡು ಪತ್ರಿಕೆಗಳಾದ ಬೀದರ ಕ್ರಾಂತಿ ಕನ್ನಡ ದಿನಪತ್ರಿಕೆಯಲ್ಲಿ ದಿ:30.10.2021 & 26.03.2022 ಮತ್ತು ಬೀದರ ಸಂದೇಶ ಹಿಂದಿ ದಿನಪತ್ರಿಕೆಯಲ್ಲಿ ದಿ:31.10.2021 & ದಿ:27.03.2022 ಗಳಂದು ಪ್ರಚೂರು ಪಡಿಸಲಾಗಿರುತ್ತದೆ (ಪತ್ರಿಕೆಗಳ ಪ್ರತಿ ಅಡಕಗೊಳಿಸಿದೆ).<br><br>ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ಮೂ.ನಿ ಹಾಗೂ ವಾ.ನಿ) ನಿಯಮಗಳು 1991 ರಂತೆ ದಿನಾಂಕ:04.10.2021 |

| | | |
|---|---|---|
| | | ರಂದು ಜರುಗಿದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ:5 ರಲ್ಲಿ ಚರ್ಚಿಸಿ ನಿರ್ಣಯಿಸಿದಂತೆ 11 ನಿವೇಶನಗಳನ್ನು ಮತ್ತು ದಿನಾಂಕ:27.12.2021 ರಂದು ಜರುಗಿದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ:20(7) ರಲ್ಲಿ ಚರ್ಚಿಸಿ ನಿರ್ಣಯಿಸಿದಂತೆ 02 ನಿವೇಶನಗಳನ್ನು e-proc. karnataka. gov.in (ಆನ್‌ಲೈನ್) ಮುಖಾಂತರ ಇ-ಹರಾಜು ಮಾಡಲಾಗಿರುತ್ತದೆ ಮತ್ತು ಹರಾಜು ಸಂಖ್ಯೆಗಳ ವಿವರ ಈ ಕೆಳಗಿನಂತಿವೆ.<br>1) UDD/2021-22/AUCTION 2311<br>2) UDD /2021-22/ AUCTION 2312<br>3) UDD /2021-22/ AUCTION 2313<br>4) UDD /2021-22/ AUCTION 2314<br>5) UDD /2021-22/ AUCTION 2315<br>6) UDD /2021-22/ AUCTION 2316<br>7) UDD /2021-22/ AUCTION 2317<br>8) UDD /2021-22/ AUCTION 2318<br>9) UDD /2021-22/ AUCTION 2319<br>10) UDD /2021-22/ AUCTION 2320<br>11) UDD /2021-22/ AUCTION 2321<br>12) UDD /2021-22/ AUCTION 2531<br>13) UDD /2021-22/ AUCTION 2532<br>ಹಾಗೂ ಸದರಿ ನಿವೇಶನಗಳ ಇ-ಹರಾಜು ಆಗಿರುವ ಕುರಿತು ದಿನಾಂಕ:27.12.2021 ರಂದು ಜರುಗಿದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ:03 ಮತ್ತು ದಿನಾಂಕ: 19.04.2022 ರಂದು ಜರುಗಿದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ:28(15) ರಲ್ಲಿ ಚರ್ಚಿಸಿ ಅನುಮೋದಿಸಿದಂತೆ ಅರ್ಹ ಫಲಾನುಭವಿಗಳಿಗೆ ಪ್ರಾಧಿಕಾರದಿಂದ ಶುದ್ಧಕ್ರಯ ಪತ್ರ ಮಾಡಲಾಗಿರುತ್ತದೆ. |
| ಇ) | ಜಾಹೀರಾತು ನೀಡಿದ್ದಲ್ಲಿ ಯಾವ ಯಾವ ಪತ್ರಿಕೆಗಳಲ್ಲಿ ಯಾವ ದಿನಾಂಕದಂದು ಪ್ರಕಟ ಮಾಡಲಾಗಿದೆ ಇದಕ್ಕಾಗಿ ಎಷ್ಟು ಅರ್ಜಿಗಳು | ಪ್ರಾಧಿಕಾರದಿಂದ ಬೀದರ ನಗರದ ಎರಡು ಪತ್ರಿಕೆಗಳಾದ ಬೀದರ ಕ್ರಾಂತಿ ಕನ್ನಡ ದಿನಪತ್ರಿಕೆಯಲ್ಲಿ ದಿ:30.10.2021 & 26.03.2022 ಮತ್ತು ಬೀದರ ಸಂದೇಶ ಹಿಂದಿ ದಿನಪತ್ರಿಕೆಯಲ್ಲಿ ದಿ:31.10.2021 & ದಿ:27.03.2022 ಗಳಂದು ಪ್ರಚೂರ ಪಡಿಸಲಾಗಿರುತ್ತದೆ. ಈ ಪ್ರಕಟಣೆಗಳಿಗೆ |

| | | |
|---|---|---|
| | ಬಂದಿವೆ; ಎಷ್ಟು ಅರ್ಜಿ ತಿರಸ್ಕೃತಗೊಂಡಿವೆ; | ಸ್ಪಂದಿಸುತ್ತಾ 26 ಅರ್ಜಿದಾರರು ಪ್ರಾಧಿಕಾರದಲ್ಲಿ ನೊಂದಣಿ ಮಾಡಿಕೊಂಡಿರುತ್ತಾರೆ. ಈ 26 ಅರ್ಜಿದಾರರಲ್ಲಿ 15 ಅರ್ಜಿದಾರರು ಇ-ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ ಮುಖಾಂತರ ಇ-ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಿರುತ್ತಾರೆ. ಈ 15 ಅರ್ಜಿದಾರರಲ್ಲಿ ಅತಿ ಹೆಚ್ಚು ಬಿಡ್ ಮಾಡಿರುವ 13 ಅರ್ಜಿದಾರರಿಗೆ 13 ವಿವಿಧ ಅಳತೆಯ ನಿವೇಶನಗಳನ್ನು ಮಾರಾಟ ಮಾಡಲಾಗಿರುತ್ತದೆ ಹಾಗೂ ಯಾವುದೇ ಅರ್ಜಿಗಳು ತಿರಸ್ಕೃತಗೊಂಡಿರುವುದಿಲ್ಲ. |
| ಈ) | ಈ ನಿವೇಶನ ಹಂಚಿಕೆಯಲ್ಲಿ ಬಹುದೊಡ್ಡ ಭ್ರಷ್ಟಾಚಾರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಎರಡು ಸರ್ವೆ ನಂಬರ್‌ನಲ್ಲಿ ಮಾರಾಟ ಮಾಡಿದ ನಿವೇಶನ ಪಾರದರ್ಶಕವಾಗಿ ನಡೆಯದೆ ಇರುವುದರಿಂದ ಇದನ್ನು ಉನ್ನತ ಮಟ್ಟದ ತನಿಖೆಗೆ ವಹಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? | ಸದರಿ ನಿವೇಶನಗಳ ಹಂಚಿಕೆಯನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ಮೂ.ನಿ ಹಾಗೂ ವಾ.ನಿ) ನಿಯಮಗಳು 1991 ರಂತೆ e-proc.karnataka.gov.in (ಆನ್ ಲೈನ್) ಮುಖಾಂತರ ಪಾರದರ್ಶಕವಾಗಿ ಮಾರಾಟ ಮಾಡಲಾಗಿರುತ್ತದೆ. |

ಸಂಖ್ಯೆ: ನಅಇ 54 ಗುಅಪ್ರಾ 2023

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು
(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು